

ಒಂದು ಊರಲ್ಲಿ ಒಂದು ಕಾಗೆ ಇತ್ತು. ಕಾಗೆಗಳು ಗುಂಪಾಗಿ ಬದುಕುತ್ತವೆ. ಒಂದು ಸಲ ಒಂದು ಕಾಗೆ ಗುಂಪಿನಿಂದ ಹೊರಗೆ ಉಳಿಯಿತು, ಓಹ್ ಜಾತಿಯಿಂದ ಹೊರಗೆ ಹಾಕಿದ್ದಾರೋ ಏನೋ ?
ಮಂಗಗಳ ಗುಂಪಲ್ಲಿ ಇರುವ ಮಂಗ ಒಂದು ಕೊಂಬೆ ಯಿಂದ ಇನ್ನೊಂದು ಕೊಂಬೆಗೆ ಹಾರುವಾಗ ಏನಾದರು ಆಯಾ ತಪ್ಪಿ ಬೀಳುವಾಗ ಒಂದು ಎಲೆ ತನ್ನ ಕಯ್ಯಲ್ಲಿ ಇಲ್ಲ ಅಂದ್ರು, ಆ ಮಂಗ ಗುಂಪಿನಿಂದ ಹೊರಗೆ ಅಂತೆ, ಹೀಗೆ ಒಂಟಿ ಮಂಗಾ ಕಾಣಲಿಕ್ಕೆ ಸಿಕ್ಕರೆ ಮಕ್ಕಳು ಈ ಕತೆ ಹೇಳಿ, ಜಾತಿ ಇಲ್ಲದ ಮಂಗ ಎಂದು ಹೇಳುತ್ತಿದ್ದರು. ನಾನೇನು ಮಂಗನ ಈ ಕತೆ ನಂಬಲಿಕ್ಕೆ ? ಹಾಗೆ ಈ ಕಾಗೆ ಜಾತಿ ಇಲ್ಲದ್ದೊ ಏನೋ ಸಂಕ್ರಾಯ ಆಚಾರಿಯ ಹಾಗೆ (ಅವರು ಜಾತಿ ಇಲ್ಲದವರಂತೆ). ಆ ಕಾಗೆಗೆ ಒಂದು ಮಾಂಸದ ತುಂಡು ಸಿಕ್ಕಿತಂತೆ, ಅದನ್ನ ತನ್ನ ಕೊಕ್ಕಿನಲ್ಲಿ ಎತ್ತಿಕೊಂಡು ಆರಾಮವಾಗಿ ತಿನ್ನಬಹುದೆಂದು ದೊಡ್ಡ ಆಲದ ಮರದ ಮೇಲೆ ಕೂತಿತು. ಇದನ್ನ ಒಂದು ನರಿ ಕಂಡಿತು, ಹೇಗಾದರೂ ಮಾಡಿ ಮೋಸದಿಂದ ಈ ಮಾಂಸದ ತುಂಡನ್ನು ಲಪಟಾಯಿಸಬೇಕೆಂದು ಮರದಡಿಗೆ ಹೋಗಿ ನರಿ ಕಾಗೆಯತ್ತ ಬಂದು ಹೇಳಿತು "ಓ ಯಾರದು, ಕಾಕರಾಜ, ಇವತ್ತು ಒಂದು ಅಪರೂಪದ ದಿನ. ನಿನ್ನ ಕಣ್ಣು ತುಂಬಾ ಹೊಳಪಾಗಿದೆ, ಮುಖ ಸುಂದರವಾಗಿದೆ. ಬಾರಿ ಅಪರೂಪ ಮಾರಾಯ ಈಗೀಗ ನೋಡ್ಲಿಕ್ಕೆ ಇಲ್ಲ, ಅತ್ತಿ ಮರದ ಹೂವಾಗಿ ಹೋದೆಯಲ್ಲಾ ? ಕಾಗೆ ಎರಡು ಕಣ್ಣುಗಳನ್ನು ಅಚ್ಚರಿಯಾಗಿ ಮಿಟುಕಿಸಿತು. ನರಿ ಯಾರಲ್ಲಿ ಮಾತನಾಡುವುದೆಂದು, ಕಾಗೆ ಸುತ್ತಲೂ ಕಕ್ಕಾಬಿಕ್ಕಿಯಾಗಿ ನೋಡಿತು, ಯಾರು ಕಾಣ ಸಿಗಲಿಲ್ಲ, ಆದರೆ ನರಿ ಒಂದೇ ಉಸುರಲ್ಲಿ ಹೇಳುತಿದೆ, ನೀನು ಬಂದದ್ದೇ ಸರಿ, ಈ ಕಾಡಿಗೆ ಬೇಸಿಗೆ ಕಾಲದಲ್ಲಿ ಮಳೆ ಬಂದಂತಾಯಿತು. ಇಡಿ ಕಾಡೇ ಸಂಭ್ರಮಾಚರಣೆ ಯಲ್ಲಿದೆ. ಆದರೆ ಕಾಗೆಗೆ ನರಿಯ ಮಾತು ಬಿಟ್ಟು ಬೇರೆ ಏನೂ ಕೇಳಿಸುತ್ತಿಲ್ಲ. ನರಿಯ ಮಾತನ್ನು ಕಿವಿ ಕೊಟ್ಟು ಆಲಿಸಿತು. ನರಿ ಇನ್ನು ಹೊಗಳಿತು ಅಹ ಅಹ ಎಷ್ಟೊಂದು ಸುಂದರ ನಿನ್ನ ರೂಪ, ಅದರಲ್ಲೂ ಹಕ್ಕಿಗೆ ರೆಕ್ಕೆಯ ಬಲವಂತೆ, ಆ ನಿನ್ನ ರೆಕ್ಕೆಯ ಗರಿಗಳಿಗೆ ಎಷ್ಟೊಂದು ಹೊಳಪಿದೆ.

ಗಾದೆ ಮಾತಿನಂತೆ "ಕಾಗೆ ಗಿಂತ ಕಪ್ಪು, ನೀರಿಗಿಂತ ತೆಳು ಬೇರೇನಿಲ್ಲ". ಅಷ್ಟೋಂದು ಕಪ್ಪಿನ, ಕಾವೂರ ಕಪ್ಪಿನ ಪಟ್ಟೆಯ ಹಾಗಿರುವ ನಿನ್ನ ಮೈ ಬಣ್ಣ, ರೂಪದಲ್ಲಿ ಮಾತ್ರವಲ್ಲದೆ ಸ್ವರದಲ್ಲೂ ಮಿಗಿಲಾದ ಸ್ವರವಂತೆ. ಆ ಕೋಗಿಲೆಯ ಸಣ್ಣ ಮರಿಗೆ (ಕೋಗಿಲೆಯ ಮೊಟ್ಟೆಗೆ ಕಾವು ಕೊಟ್ಟು ಮರಿ ಮಾಡುವುದು ಕಾಗೆ) ಹಾಡಲು ಗೂಡಲ್ಲೆ ಕಲಿಸುವುದು ನೀವಲ್ಲವೇ? ಕಾಡಿನ ಎಲ್ಲ ಪ್ರಾಣಿ ಪಕ್ಷಿಗಳು ತಲೆ ಮೇಲಾಗಿಸಿ ಬಾಯಿ ಆಕಳಿಸಿ ಕಾಯುತ್ತಿವೆ ನಿನ್ನ ಹಾಡು ಕೇಳಲು. ನಿನ್ನ ಹಾಡಿಗೆ ಮರುಳಾಗಿ ನರ್ತನ ಮಾಡುವುದಕ್ಕಾಗಿ ಕಾಯುತಿದ್ದಾರೆ"

ಒಂದು ಹಾಡು ಹಾಡುವೆಯಾ? ತನಗೆ ತಿಳಿಯದ ತನ್ನ ಗುಣಗಾನವನ್ನು ನರಿಯ ಬಾಯಲ್ಲಿ ಕೇಳಿ ಕಾಗೆಗೆ ಬಹಳ ಸಂತಸವಾಗಿ "ಕಾಂವ್ ಕಾಂವ್ " ಎದು ಹಾಡಲು ಸುರಿಮಾಡಿದ ತಕ್ಷಣ ಕಾಗೆಯ ಕೊಕ್ಕಲ್ಲಿ ಇದ್ದ ಮಾಂಸದ ತುಂಡು ನರಿಯ ಬಾಯಿಗೆ ಬಿತ್ತು.

ನರಿ ಮಾಂಸದ ತುಂಡನ್ನು ಸರಿಯಾಗಿ ಜಗಿದು ತಿಂದು, ಮೇಲೆ ಇರುವ ಕಾಗೆಯನ್ನು ನೋಡಿ ನಕ್ಕಿತು. ಕಾಗೆಗೆ ಆಗಲೇ ಅರ್ಥವಾಯಿತು ಮೋಸಕ್ಕೊಳಗಾದೆ ಎಂದು. ಒಂದು ಮಾಂಸದ ತುಂಡು ಹೋದರೂ, ಒಂದು ದೊಡ್ಡ ಬುದ್ಧಿ ಕಲಿತುಕೊಂಡಿತು. ಹೊಗಳಿಕೆಗೆ ಮರುಳಾಗಬೇಡಿ ಮತ್ತು ಯಾರನ್ನಾದರೂ ನಂಬಿ, ಆದರೆ ಈ ಠಕ್ಕ ನರಿಯನ್ನು ಮಾತ್ರ ನಂಬಬೇಡಿ ಎಂದು ಕಾಡಲ್ಲಿ ಎಲ್ಲರಿಗು ಸಾರಿತು.